ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಮಾನ್ಯ ಸಭಾಧ್ಯಕ್ಷರೆ, I follow according to him very stricty. ಅದರಲ್ಲಿ one percent ಲೋಪ ಇಲ್ಲದೆ ಮಾಡುತ್ತೇನೆ. ನಮ್ಮ C&R Rules ನಲ್ಲಿ ಏನು permit ಮಾಡುತ್ತದೆ ಅದನ್ನು ಮಾಡುತ್ತೇವೆ. ಇದರಲ್ಲಿ I have no any specisl interest to recruit them ನಿಯಮಾನುಸಾರ ಆಗಬೇಕು. ಅದನ್ನು ತಾವು ಇಬ್ಬರೂ ಹೇಳಿದ ಹಾಗೆ ಮಾಡಿಕೊಡುತ್ತೇವೆ. ಕೌನ್ಸಿಲಿಂಗ್ ಮಾಡುವುದನ್ನು ಈಗ ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ. ಅದನ್ನು ಸರಿಪಡಿಸುವುದಕ್ಕೆ ಏನಾಗಬೇಕೋ ಅದನ್ನು ಮಾಡಿಕೊಡುತ್ತೇವೆ. ಅದಾದ ಮೇಲೆ ಏನಾದರೂ ಕ್ರಮ ತಪ್ಪಿದರೆ ಅದರ ಬಗ್ಗೆ ತಾವಿಬ್ಬರು ಕೇಳಬಹುದು.

ಶ್ರೀ ತನ್ವೀರ್ ಸೇಠ್ : ಬೆಳಗಾಂ ಅಧಿವೇಶನದಲ್ಲಿ ತಾವು ಆಶ್ವಾಸನೆಯನ್ನು ಕೊಟ್ಟಿದ್ದಿರಿ. C&R Rules ನಮ್ಮ ಇಲಾಖೆಯಲ್ಲಿ ಇನ್ನಷ್ಟು strong ಮಾಡುವುದಕ್ಕೆ ಈಗಾಗಲೇ ಅದಕ್ಕೆ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಬಗ್ಗೆ ಇನ್ನಷ್ಟು ಚರ್ಚೆಯನ್ನು ಮಾಡಿ ಇಲಾಖೆಯನ್ನು ಮುಂದುವರೆಸಲಿಕ್ಕೆ ಯಾವ ರೀತಿ strong ಮಾಡಬೇಕು ಅದನ್ನು ಮಾಡೋಣ.

ಅಧ್ಯಕ್ಷರು: ಗೂಳಿಹಟ್ಟಿ ಡಿ.ಶೇಖರ್, ಪ್ರಶ್ನೆ ಕೇಳಿ.

ಹೊನ್ನವಳ್ಳಿ ಏತ ನೀರಾವರಿ ಯೋಜನೆ

43 : (334)

ಶ್ರೀ ಗೂಳಿಹಟ್ಟಿ ಡಿ ಶೇಖರ್ (ಹೊಸದುರ್ಗ)

ಅ) ಹೊನ್ನವಳ್ಳಿ ಏತ ನೀರಾವರಿ ಯೋಜನೆಯಿಂದ ಹೊಸದುರ್ಗ ತಾಲ್ಲೂಕಿನ ಎಷ್ಟು ಕೆರೆಗಳಿಗೆ ಕುಡಿಯುವ ನೀರಿಗೆ ಕೆರೆ ತುಂಬಿಸುವ ಯೋಜನೆ ಇದೆ;

ಆ) ಇದರ ಉದ್ಘಾಟನೆಯಾದರೂ ಕೆರೆಗೆ ನೀರು ಯಾವಾಗ ತುಂಬಿಸಲಾಗುವುದು;

ಇ) ಬರಗಾಲದಿಂದ ಕೂಡಿದ ಹೊಸದುರ್ಗ ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಕೆರೆಗಳಿಗೆ ನೀರನ್ನು ತುಂಬಿಸುವ ಉದ್ದೇಶವಿದೆಯೇ;

ಈ) ಬೆಲಗೂರು ಕೆರೆಗೆ ನೀರು ತುಂಬಿಸುವ ಉದ್ದೇಶ ಇದೆಯೇ?

ಶ್ರೀ ಬಸವರಾಜು ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಹೊನ್ನವಳ್ಳಿ ಏತ ನೀರಾವರಿ ಯೋಜನೆಯಿಂದ ಹೊಸದುರ್ಗ ತಾಲ್ಲೂಕಿನ ಬಲ್ಲಾಳ ಸಮುದ್ರ ಮತ್ತು ಸುತ್ತಮುತ್ತಲಿನ 7 ಗ್ರಾಮಗಳ ಕುಡಿಯುವ ನೀರಿಗಾಗಿ ಬಲ್ಲಾಳ ಸಮುದ್ರ ಕೆರೆಗೆ 32.93 ಎಂ.ಸಿ.ಎಫ್.ಟಿ ನೀರನ್ನು ಒದಗಿಸಲು ಯೋಜಿಸಿದೆ.

ಆ) ಈ ಯೋಜನೆಯ ಉದ್ಘಾಟನೆಯನ್ನು ದಿನಾಂಕ:11–01–2013 ರಂದು ಮಾನ್ಯ ಮುಖ್ಯಮಂತ್ರಿಗಳು ನೇರವೇರಿಸಿದ್ದು, ಹೇಮಾವತಿ ಯೋಜನೆಯ ಅಣೆಕಟ್ಟೆಯಿಂದ ತುಮಕೂರು ಶಾಖಾ ನಾಲೆಗೆ ಪ್ರತಿ ಸಾಲಿನಲ್ಲಿ ಜುಲೈ / ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ನೀರನ್ನು ನಾಲೆಗಳಲ್ಲಿ ಹರಿಸ–ಲಾಗುತ್ತದೆ. ಈ ಸಾಲಿನ ಡಿಸೆಂಬರ್‌ನಲ್ಲಿ ನೀರು ಹರಿಸುವುದನ್ನು ನಿಲ್ಲಿಸಿದ್ದು, ಪ್ರಸ್ತುತ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಅತಿ ಕಡಿಮೆ ಇರುವ ಕಾರಣ, ಬಲ್ಲಾಳಸಮುದ್ರ ಕೆರೆಗೆ ನೀರು ಹರಿಸಲು ಸಾಧ್ಯವಿಲ್ಲದೇ ಇರುವ ಕಾರಣ ಮುಂದಿನ ಸಾಲಿನಲ್ಲಿ ಈ ಕೆರೆಗೆ ನೀರನ್ನು ಹರಿಸಲಾಗುವುದು.

ಇ) ಪ್ರಸ್ತುತ ಹೊಸದುರ್ಗ ತಾಲ್ಲೂಕಿನ ಬಲ್ಲಾಳಸಮುದ್ರ ಕೆರೆಯನ್ನು ಹೊರತುಪಡಿಸಿ ಯಾವುದೇ ಕೆರೆಗಳಿಗೆ ನೀರನ್ನು ತುಂಬಿಸಲು ಯೋಜಿಸಿರುವುದಿಲ್ಲ.

ಈ) ಬೆಲಗೂರು ಗ್ರಾಮದ ಕುಡಿಯುವ ನೀರಿನ ಬೇಡಿಕೆಯನ್ನು ಬಲ್ಲಾಳಸಮುದ್ರ ಕೆರೆಗೆ ಒದಗಿಸಲು ಹೊನ್ನವಳ್ಳಿ ಕುಡಿಯುವ ಏತ ನೀರಾವರಿ ಯೋಜನೆಯಲ್ಲಿ ಸೇರಿದ್ದು, ಬೆಲಗೂರು ಕೆರೆಗೆ ನೀರನ್ನು ತುಂಬಿಸುವುದು ಈ ಕುಡಿಯುವ ನೀರಿನ ಯೋಜನೆಯಲ್ಲಿ ಸೇರಿರುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ನಮ್ಮದು ಹೊಸದುರ್ಗ ಸಾಮಾನ್ಯ. ತಮಿಳುನಾಡಿನಲ್ಲಿಲ್ಲ, ಆಂಧ್ರದಲ್ಲಿಲ್ಲ. ಈಗಾಗಲೇ ಕಾವೇರಿ ಬಗ್ಗೆ ಬಹಳಷ್ಟು ಸಮಸ್ಯೆಯಾಗುತ್ತಿದೆ. ಕಾವೇರಿ ನೀರು ತಮಿಳುನಾಡಿಗೆ ಬಹಳಷ್ಟು ಹರಿದುಹೋಗುತ್ತಿದೆ. ಅಲ್ಲಿ ಸಾಕಷ್ಟು ಕಡಿಮೆ ನೀರು ಇದ್ದರೂ ಕೂಡ ಅಲ್ಲಿಂದ ನೀರು ಬಿಡುತ್ತಿದ್ದಾರೆ. ಆದರೆ ನಾವೀಗ ಕುಡಿಯುವುದಕ್ಕೆ ನೀರು ಕೇಳುತ್ತಿರುವುದು ಬರಗಾಲದಿಂದ

ತೀವ್ರ ತೊಂದರೆಯಲ್ಲಿರುವಂಥ ಹೊಸದುರ್ಗ ನಗರಕ್ಕೆ ಮತ್ತು ಹಳ್ಳಿಗಳಿಗೆ ಪೈಪ್‌ಲೈನ್‌ಗಳನ್ನು ಹಾಕಿ ಕೆಲಸ ಮಾಡಿದ್ದಾರೆ. ಸುಮಾರು 40–45 ಕಿ.ಮೀ.ವರೆಗೆ ಪೈಪ್‌ಲೈನ್‌ಗಳನ್ನು ಕುಡಿಯುವ ನೀರಿಗಾಗಿ ಹಾಕಿದ್ದಾರೋ ಅಥವಾ ಆ ಕಂಟ್ರಾಕ್ಟರ್ ದುಡ್ಡು ಮಾಡಿಕೊಳ್ಳುವುದಕ್ಕೋಸ್ಕರ ಪೈಪ್‌ಲೈನ್ ಹಾಕುವ ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ನಮಗೆ ಬೇಸಿಗೆ ಕಾಲದಲ್ಲಿ ತುಂಬಾ ತೊಂದರೆಯಿರುವುದರಿಂದ ದಯಮಾಡಿ ಕುಡಿಯುವ ನೀರಿಗೆ ನೀರು ಬಿಡಿಸುವಂಥ ವ್ಯವಸ್ಥೆ ಆಗಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ಸರ್ಕಾರಕ್ಕೆ ಮತ್ತು ಬೊಮ್ಮಾಯಿಯವರಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಹೋನ್ನವಳ್ಳಿ ಏತ ನೀರಾವರಿ ಯೋಜನೆಯಡಿಯಲ್ಲಿ ಹೊಸದುರ್ಗ ತಾಲ್ಲೂಕಿನ ಬಲ್ಲಾಳ ಸಮುದ್ರ ಮತ್ತು ಸುತ್ತಮುತ್ತಲಿನ 7 ಗ್ರಾಮಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಹೆಚ್ಚಿಸಲು ಕೆರೆ ತುಂಬಿಸುವುದಕ್ಕ 32 ಎಂ.ಸಿ.ಎಫ್.ಟಿ ನೀರನ್ನು ಒದಗಿಸಿದ್ದೇವೆ. Record time ನಲ್ಲಿ ಕಾಮಗಾರಿಗಳನ್ನು ಮುಗಿಸಿದ್ದೇವೆ. ಡಿಸೆಂಬರ್‌ನಲ್ಲಿ ನೀರನ್ನು ನಿಲ್ಲಿಸುತ್ತಿದ್ದೇವೆ ಅದಾದ 15 ದಿವಸಗಳ ನಂತರ ಪೈಪ್‌ಲೈನ್ ಕಾಮಗಾರಿ ಪೂರ್ಣವಾಗಿದೆ. ಪ್ರಸ್ತುತ ವರ್ಷ ನೀರನ್ನು ಹರಿಸುವ ಸಮಯ ಮುಗಿದಿದ್ದರಿಂದ ನಾವು ಇವತ್ತು ಹೋನ್ನವಳಿ ಭಾಗದಲ್ಲಿ trial ಏನು ಮಾಡಿದ್ದೇವೆ ಅಲ್ಲಿ ಮುಂಚೆಯೇ ಕಾಮಗಾರಿಯಾಗಿದ್ದು, ನೀರು ಬಿಟ್ಟಿದ್ದೇವೆ. ಕೊನೆ ಭಾಗದಲ್ಲಿ ಸುಮಾರು 40 ಕಿ.ಮೀ. dry run ಆಗಿ ದೊಡ್ಡ ಕೆರೆ ಇದೆ. ಈ ಕೆರೆಯನ್ನು ತುಂಬಿಸೋಣವೆಂದು ಅವರೇ ಆಗ್ರಹ ಮಾಡಿದ್ದರು. ಅವರ ಆಗ್ರಹದ ಮೇಲೆಯೇ ನಾವು ಮಾಡಿದ್ದೇವೆ. ಅಲ್ಲಿನ ಜನರಿಗೆ ಅವಶ್ಯಕತೆಯಿರುವಂತೆ ಮಾಡಿದ್ದೇವೆ. ನಾವು ಮಾಡಿರುವ ಕಾಮಗಾರಿಗಳನ್ನು contractor ಸಲುವಾಗಿ ಮಾಡಿದ್ದೇವೆಂಬ ಹೇಳಿಕೆ ಬಹಳ ತಪ್ಪಾಗುತ್ತದೆ. ತಮ್ಮ ಭಾಗ ವಿಶೇಷವಾಗಿ ಬರಗಾಲ ಪೀಡಿತ ಪ್ರದೇಶವಾಗಿದೆ, ಆ ಭಾಗಕ್ಕೆ ಅನುಕೂಲವಾಗಲೆಂದು 45 dry run ಕಿ.ಮೀ. ಮಾಡಿ ಪೈಪ್ ಹಾಕಿ ಎಲ್ಲವನ್ನೂ ಕೂಡ ಮಾಡಿದ್ದೇವೆ. ನೀರು ಬಿಡುವ ಸೀಸನ್ ಮುಗಿದಿದ್ದರಿಂದ ತೊಂದರೆಯಾಗಿದೆ. ಆದಾಗ್ಯೂ ಕೂಡ ಮಾನ್ಯ ಶಾಸಕರು ವೈಯಕ್ತಿಕವಾಗಿ ನನಗೆ ಬಹಳಷ್ಟು ಬಾರಿ ಒತ್ತಾಯ ಮಾಡಿದ್ದಾರೆ. ಅವರ ಭಾಗದ ಬಗ್ಗೆ ಕಳಕಳಿಯಿರುವ ಹಿನ್ನೆಲೆಯಲ್ಲಿ ಈಗಾಗಲೇ ICC ಸಭೆಯನ್ನು ಮಾಡಿ ಆದೇಶ ಕೊಟ್ಟಿದ್ದೇನೆ. ಈ ಸಭೆಯಲ್ಲಿ ಸ್ಥಳೀಯ ಶಾಸಕರೂ ಕೂಡ

ಪ್ರತಿನಿಧಿಸುತ್ತಾರೆ. ನೀರಿನ ನಿರ್ವಹಣೆಯಲ್ಲಿ ಏನಾದರೂ ಉಳಿತಾಯ ಮಾಡಿಕೊಂಡು ಬಿಡಲು ಸಾಧ್ಯವಿದ್ದರೆ ಮಾಡುತ್ತೇವೆ. ಏಕೆಂದರೆ ಹೊನ್ನವಳ್ಳಿಯೇ 100 ಕಿ.ಮೀ. ದೂರವಿದೆ ಅಲ್ಲಿಂದ 50 ಕಿ.ಮೀ. ಒಟ್ಟು 150 ಕಿ.ಮೀ. ನೀರನ್ನು ಹಾರಿಸುವಂತಹ ಪರಿಸ್ಥಿತಿಯಿದೆ. ಆದುದರಿಂದ ಅದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಸಾಧ್ಯಸಾಧ್ಯತೆಯನ್ನು ನೋಡಿಕೊಂಡು ICC ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಇದನ್ನು ಎಷ್ಟು ದಿವಸದಲ್ಲಿ ಮಾಡುತ್ತಾರೆಂಬ ಮಾಹಿತಿ ಬೇಕು. ಏಕೆಂದರೆ ನಮ್ಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಇದೆ.

ಶ್ರೀ ಬಸವರಾಜ ಬೊಮ್ಮಾಯಿ : ಆದಷ್ಟು ಬೇಗ ಆ ಸಭೆಯನ್ನು ಮಾಡುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : Election ಮುಗಿದ ನಂತರ ಮಾಡುತ್ತಿರೋ ಅಥವಾ Before election ಮಾಡುತ್ತಿರೋ?

ಶ್ರೀ ಬಸವರಾಜ ಬೊಮ್ಮಾಯಿ : ಕಾಮಗಾರಿಯಾದರೆ ಇಷ್ಟು ದಿವಸದಲ್ಲಿ ಮಾಡಬಹುದೆಂದು ಹೇಳಬಹುದು. ಆದರೆ ನೀರಿನ ನಿರ್ವಹಣೆ ಪ್ರಶ್ನೆಯಾಗಿರುವುದರಿಂದ ಆದಷ್ಟು ಬೇಗ ICC ಸಭೆಯನ್ನು ಮಾಡಿ ಮಾಡುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ನೀರನ್ನು ಬಿಡಬಹುದು. ಕೇವಲ ಒಂದೇ ಒಂದು phone call ಸಾಕು. ನಾವು ಪಕ್ಷೇತರರಾಗಿ ಗೆದ್ದಿದ್ದೇವೆಂಬ ಕಾರಣಕ್ಕೆ ಉದಾಸೀನ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಬೇಗ ಮಾಡಲು ಹೇಳಿ.

ಅಧ್ಯಕ್ಷರು : ಆದಷ್ಟು ಬೇಗ ಮಾಡಿ ಕೊಡುತ್ತಾರೆ.

ಶ್ರೀ ಬಸವರಾಜು ಬೊಮ್ಮಾಯಿ : ಅದಷ್ಟು ಬೇಗ ICC ಸಭೆಯನ್ನು ಮಾಡಿ ತೀರ್ಮಾನ ಮಾಡುತ್ತೇವೆ.